<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ</u>

ಸಿ.ಸಿ ಃ **378/2020**

ಸಾಕ್ಷಿದಾರರ ಹೆಸರು ಃ ಡಾಃ ಶ್ರೀರಂಜಿನಿ

ಗಂಡನ ಹೆಸರು ಃ ಶ್ರೀನಿವಾಸ್

ವಯಸ್ಸು ಃ **40** ವರ್ಷ

ಉದ್ಯೋಗ ಃ ನೇತ್ರ ತಜ್ಞರು

ವಾಸಸ್ಥಳ ಃ ನ ರಾ ಪುರ

ಸಿ.ಡಬ್ಲ್ಯೂ- **10**

ಪಿ.ಡಬ್ಲ್ಯೂ- **6**

**ದಿನಾಂಕಃ 26.10.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

<u>ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ</u>

2017 ರಿಂದ ಈವರೆಗೆ ನಾನು ನ ರಾ ಪುರ ಸರ್ಕಾರಿ ಆಸ್ಪತ್ರೆಯಲ್ಲಿ ನೇತ್ರ ತಜ್ಞರರಾಗಿ ಕರ್ತವ್ಯ ನಿರ್ವಹಿಸುತ್ತಾ ಬಂದಿರುತ್ತೇನೆ.

ದಿನಾಂಕಃ 25.04.2020 ರಂದು ರಾತ್ರಿ 11.35 ಗಂಟೆ ಸಮಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿ ಚಾಸಾ-1 ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು, ಅವರಿಗೆ ಈ ಕೆಳಕಂಡ ಗಾಯಗಳಿಗೆ ಚಿಕಿತ್ಸೆ ನೀಡಿ ಉಪಚರಿಸಿರುತ್ತೇನೆ .

0.5x0.5 ಸೆ.ಮೀ ಎರಡು ಪಾದಗಳ ಹೆಬ್ಬೆರಳುಗಳಿಗೆ ತರಚಿದ ಗಾಯ.

ಬಲಗೈ ಮುಂಗೈ ಮೇಲೆ ನೋವಿನ ಗಾಯ

ಎಡ ಭುಜದ ಮೇಲೆ ನೋವಿನ ಗಾಯ

ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿರುತ್ತವೆ.

ಈ ಮೇಲ್ಕಂಡ ಗಾಯಗಳಿಗೆ ಸಂಬಂಧಿಸಿ ಗಾಯದ ಪ್ರಮಾಣಪತ್ರ ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸದರಿ ಗಾಯಗಳು ಹಲ್ಲೆಯಿಂದ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

ಪಾಟೀ ಸವಾಲು ಆರೋಪಿತರ ಪರ ಶ್ರೀ. ಕೆ ಎಸ್ ಎಸ್ ವಕೀಲರಿಂದ ಃ

ನಾನು ಸದರಿ ಪ್ರಕರಣದಲ್ಲಿ ಪೊಲೀಸರಿಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮಾಹಿತಿ ನೀಡಿದ ನಂತರ ಪೊಲೀಸರು ಬಂದು ವಿಚಾರಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಸಮಯದಲ್ಲಿ ಕೋವಿಡ್ ಲಾಕ್ ಡೌನ್ ನಡೆಯುತ್ತಿತ್ತು ಎಂದರೆ ಸರಿ. ಯಾವುದೇ ಚಿಕಿತ್ಸೆ ನೀಡಬೇಕಾದರೆ ಅವರ ಆಧಾರ್ ಕಾರ್ಡ್ ಪಡೆಯಬೇಕು ಎಂದರೆ ಸಾಕ್ಷಿಯು ತುರ್ತು ಚಿಕಿತ್ಸೆ ಇದ್ದರೆ ಪಡೆಯುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರಿಗೆ ಮೊದಲಿಗೆ ಕೋವಿಡ್ ಟೆಸ್ಟ್ ಮಾಡಿಸಿರುವುದಿಲ್ಲ ಎಂದರೆ ಸರಿ. ನಿಪಿ-7 ರಲ್ಲಿ ತೋರಿಸಿರುವ ಎಕ್ಸ್ ರೇ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿ ಎಡವಿ ಬಿದ್ದಾಗ ನಿಪಿ-7 ರಲ್ಲಿ ತೋರಿಸಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

ಃಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

Sd/-
ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ